ಬೆಳ್ತಂಗಡಿಯ ಮುಂಡಾಜೆಯಲ್ಲಿ ಸರ್ಕಾರಿ ಕಿರಿಯ ಕಾಲೇಜಿನ ಮಂಜೂರಾತಿ

೨೪೦ (೪೧೨) ಶ್ರೀ ಕೆ. ವಸಂತಬಂಗೇರ (ಬೆಳ್ತಂಗಡಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ:—

ಅ) ಬೆಳ್ತಂಗಡಿ ತಾಲ್ಲೂಕಿನ ಮುಂಡಾಜೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಯನ್ನು ಕಿರಿಯ ಕಾಲೇಜಾಗಿ ಪರಿವರ್ತಿಸುವ ಮನವಿ ಬಂದಿದೆಯೆ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ಬಂದಿಲ್ಲ.

ಆ) ೧೯೮೫–೮೬ ರಲ್ಲಿ ಸರ್ಕಾರಿ ಪ್ರೌಢಶಾಲೆ ಮತ್ತು ಕಿರಿಯ ಕಾಲೇಜು ಆರಂಭಿಸದಿರಲು ಸರ್ಕಾರ ನಿರ್ಧರಿಸಿರುವುದರಿಂದ ಈ ವರ್ಷ ಕ್ರಮ ಕೈಗೊಳ್ಳಲಾಗುವುದಿಲ್ಲ.

ಶ್ರೀ ಕೆ. ವಸಂತ ಬಂಗೇರ.—ಅಧ್ಯಕ್ಷರೇ, ನನ್ನ ಒಂದನೇ ಪ್ರಶ್ನೆಗೆ ಮನವಿ ಬಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ''ಮನವಿ ಬಂದಿದೆ, ಆದರೆ ಅದು ಮಾಯವಾಗಿದೆ'' ಎಂದು ಉತ್ತರ ಕೊಟ್ಟಿದ್ದರೆ ಒಳ್ಳೆಯದಿತ್ತು. ಮುಂದಿನ ವರ್ಷವಾದರೂ ಮುಂಡಾಜೆಯಲ್ಲಿ ಸರ್ಕಾರಿ ಪ್ರೌಢಶಾಲೆಯನ್ನು ಜೂನಿಯರ್ ಕಾಲೇಜ್ ಆಗಿ ಪರಿವರ್ತಿಸಲು ಅನುಮತಿಯನ್ನು ಕೊಡುತ್ತೀರಾ ? ಈ ವರ್ಷ ರಾಜ್ಯದಲ್ಲಿ ಒಂದೇ ಒಂದು ಹೈಸ್ಕೂಲಿಗೆ ಸರ್ಕಾರ ಅನುಮತಿ ಕೊಟ್ಟಿಲ್ಲ. ಈ ದೆಸೆಯಿಂದ ಫೇಲಾದ ವಿದ್ಯಾರ್ಥಿಗಳಿಗೆ ಶಾಲೆಗೆ ಸೇರುವ ಅವಕಾಶ ಸಿಕ್ಕಿಲ್ಲ. ಇಷ್ಟೇ ಅಲ್ಲ, ಕುಟುಂಬ ಯೋಜನೆಯನ್ನು ಉತ್ತಮ ರೀತಿಯಲ್ಲಿ ಅಸುಖ್ಯಾನಕ್ಕೆ ತಂದಿರುವುದರಿಂದ ಫೇಲಾದ ವಿದ್ಯಾರ್ಥಿಗಳಿಗೂ ಕೂಡ ಹೈಸ್ಕೂಲಿಗೆ ಸೇರುವ ಅವಕಾಶ ಲಭಿಸಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಸರ್ಕಾರಿ ಶಾಲೆಗಳಲ್ಲಿ ಪ್ರತಿಯೊಬ್ಬರಿಗೂ ಅವಕಾಶ ಕೊಡುವ ಏರ್ಪಾಡು ಮಾಡುತ್ತೇವೆ. ಇದನ್ನು ನಿರಾಕರಣೆ ಮಾಡುವುದಿಲ್ಲ. ಜೂನಿಯರ್ ಕಾಲೇಜ್ ಆಗಿ ಪರಿವರ್ತಿಸಲು ಮುಂದಿನ ವರ್ಷದಲ್ಲಿ ಪರಿಶೀಲಿಸುವಿರಾ ಎಂದು ಕೇಳಿದ್ದಾರೆ. ಅದ್ಯತೆ ಮೇರೆಗೆ ಇದನ್ನು ಮಾಡುವ ಏರ್ಪಾಡು ಮಾಡುತ್ತೇವೆ.

ಶ್ರೀ ಕೆ. ವಸಂತಬಂಗೇರ.—ಬೆಳ್ತಂಗಡಿಯಲ್ಲಿರುವ ಪರಿಸ್ಥಿತಿ ನನ್ನ ಗಮನಕ್ಕೆ ಬಂದಿದೆ. ಅನೇಕ ವಿದ್ಯಾರ್ಥಿಗಳು, ಫೇಲಾದವರಿಗೆ, ಮತ್ತು ಪಾಸಾದವರಿಗೆ ಶಾಲೆಗಳಿಗೆ ಸೇರಲಿಕ್ಕೆ ಅವಕಾಶ ಸಿಕ್ಕಿಲ್ಲ. ಮುಂದಿನ ವರ್ಷ ರಾಜ್ಯದಲ್ಲಿ ಹೆಚ್ಚು ಸರ್ಕಾರಿ ಶಾಲೆಗಳನ್ನು ತೆಗೆಯುವುದಕ್ಕೆ ಅವಕಾಶ ಕೊಡುತ್ತೀರಾ? ಬೆಳ್ತಂಗಡಿ ತಾಲ್ಲೂಕಿನಲ್ಲಿ ಕನಿಷ್ಟ ಐದು ಶಾಲೆಗಳನ್ನಾದರೂ ತೆರೆಯುವುದಕ್ಕೆ ಅನುಮತಿ ಕೊಡುತ್ತೀರಾ ?

ಶ್ರೀ ಎಂ. ರಘುಪತಿ.—ನಿನ್ನೆತಾನೆ ನಾನು ಪ್ರಕಟಣೆ ಮಾಡಿದ್ದೇನೆ. ತನಿಖಾ ಸಮಿತಿಯನ್ನು ಕಳಿಸುತ್ತೇನೆ. ತನಿಖಾ ಸಮಿತಿ ಅಲ್ಲಿ ಐದು ಶಾಲೆಗಳನ್ನು ಕೊಡಿಸಿ ಕೆಂದು ಅಭಿಪ್ರಾಯ ಪಟ್ಟರೆ ಕೊಡುವುದಕ್ಕೆ ನಾನು ಏರ್ಪಾಡು ಮಾಡುತ್ತೇನೆ. ಸರ್ಕಾರದ ಈ ನೀತಿ ಒಂದು ವರ್ಷ ಮಾತ್ರ. ಮುಂದಿನ ವರ್ಷ ಸರ್ಕಾರಿ ಶಾಲೆಗಳನ್ನು ಕೊಡುತ್ತೇವೆ ಎಂದು ಹೇಳುತ್ತೇನೆ.

ಶಿವಮೊಗ್ಗದಲ್ಲಿ ಅರಣ್ಯ ಕಾಲೇಜು ಸ್ಥಾಪಿಸುವುದು

೨೪೧ (೧೬೮) ಶ್ರೀ ಕೆ. ಹೆಚ್. (ಶ್ರೀನಿವಾಸ ಶಿವಮೊಗ್ಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ:—

ಅ) ಕರ್ನಾಟಕ ರಾಜ್ಯದಲ್ಲಿ ಪದ ನಿರ್ಮಾಣ ಕಾಲೇಜನ್ನು ಸ್ಥಾಪಿಸಲು ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆಯೇ ?

ಆ) ಹಾಗಾದರೆ, ಅವರ ಸ್ವರೂಪ ಮತ್ತು ಪಠ್ಯಕ್ರಮದ ಕಾಲಾವಧಿ ?